ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಗ್ಗೆ

2073 (2465) : ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸ್ವರ್ಣ ನದಿಯ 2ನೇ ಹಂತದ ನೀರು ಸರಬರಾಜು ಯೋಜನೆಯನ್ನು ಉಡುಪಿ ನಗರಸಭೆ ಈಗಿನ ಎಲ್ಲಾ ಪ್ರದೇಶಗಳಿಗೆ ಅನ್ವಯವಾಗುವಂತೆ (ಬೈಲೂರು, ಮಲ್ಪೆ, ಪುತ್ತೂರು, ಶಿವಳ್ಳಿ ಹೆರ್ಗ) ಮಾಡಲಾಗಿದೆಯೇ?

(ಆ) ಈ ಯೋಜನೆಯ ಪರಿಪೂರ್ಣ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ? ಇದನ್ನು ಎಂದು ಪ್ರಾರಂಭಿಸಲಾಗುವುದು? ಈ ಯೋಜನೆಯ ಕಾಮಗಾರಿ ಪೂರ್ತಿಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಬಿ.ಚಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಹೌದು

(ಆ) ಎ.ಡಿ.ಬಿ.ಯ ಹಣಕಾಸಿನ ನೆರವಿನಡಿ, ಉಡುಪಿ-ಕುಂದಾಪುರ ಹಾಗೂ ಈ ಪಟ್ಟಣಗಳ ಮಧ್ಯೆ ಇರುವ ಗ್ರಾಮಗಳನ್ನೊಳಗೊಂಡಂತೆ ವರಾಹಿ ನದಿಯ ನೀರನ್ನು ಆಸರೆಯಾಗಿರಿಸಿಕೊಂಡು, ರೂ. 58.206 ಕೋಟಿ ವೆಚ್ಚದ ಅಂದಾಜು ಯೋಜನೆಯ ಕಾರ್ಯ ಸಾಧ್ಯತಾ ವರದಿಯನ್ನು ತಯಾರಿಸಲಾಗಿದೆ. ಈ ಯೋಜನೆಯನ್ನು ಕರ್ನಾಟಕ ಕರಾವಳಿ ಪರಿಸರ ಆಡಳಿತ ಮತ್ತು ನಗರಾಭಿವೃದ್ಧಿ ಯೋಜನೆಯಡಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆ ಪರಿಶೀಲನಾ ಹಂತದಲ್ಲಿದೆ.

ಸಿಂದಗಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ.

2074 (2435) : ಶ್ರೀ ಸುಣಗಾರ ಶರಣಪ್ಪ (ಸಿಂಧಗಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 2000-2001ನೇ ಸಾಲಿನಲ್ಲಿ ಹೆಚ್ಚು ಅನುದಾನ ಸಿಂದಗಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಮಗಾರಿಗಳಿಗಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಕೇಳಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಎಷ್ಟು ಅನುದಾನ ಸರ್ಕಾರವು ನೀಡಲಾಗುವುದು?

(ಇ) ಸಿಂದಗಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ನಾಗರೀಕ ಸೌಲಭ್ಯ ಒಳಚರಂಡಿಗಳು ಪುಟ್ ಪಾತ್‌ಗಳು ರಸ್ತೆ ರಿಪೇರಿಗಾಗಿ 5 ಕೋಟಿ ರೂಪಾಯಿ ಹಣ ಆಯವ್ಯಯದಲ್ಲಿ ಮುಂದಿನ ಆಯವ್ಯಯದಲ್ಲೂ ಸೇರಿಸಿ ಮಂಜೂರಿ ನೀಡಬೇಕೆಂದು ಕೋರಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?